


ಪೂರೈಕೆಯಾದ ಚಿನ್ನವೆಲ್ಲ ಭಾರತೀಯರ ಮನೆಗಳಲ್ಲಿ ಅನುತ್ಪಾದಕ ವಸ್ತುವಾಗಿ ಕೂತಿದ್ದು, ಆರ್ಥಿಕ ದೃಷ್ಟಿಯಿಂದ ತೀವ್ರ ಹೊಡೆತ ನೀಡುತ್ತಿದೆ. ಭಾರತೀಯರರಲ್ಲಿ ಸಾಂಪ್ರದಾಯಕವಾಗಿ ಹಾಗೂ ಸಾಂಸ್ಕೃತಿಕವಾಗಿ ಈ ಚಿನ್ನ ಎಂಬುದು ಪ್ರಮುಖ ಪಾತ್ರ ವಹಿಸಿದ್ದು, ಡಬ್ಲುಜಿಸಿ ವರದಿಯ ಪ್ರಕಾರ ಸುಮಾರು 25 ಸಾವಿರ ಟನ್ ಚಿನ್ನ ಈ ರೀತಿ ಅನುತ್ಪಾದಕ ವಸ್ತುವೆಂಬ ಹಣೆಪಟ್ಟಿ ಕಟ್ಟಿಕೊಂಡಿದೆ. ಸಿರಿವಂತರು, ತೆರಿಗೆ ಕಳ್ಳರು, ಅಕ್ರಮವಾಗಿ ಆಸ್ತಿ ಸಂಪಾದನೆ ಮಾಡಿದವರು ಸಂಪತ್ತನ್ನು ಅಡಗಿಸಲು ಮಾಡುವ ಹೂಡಿಕೆಯೆಂದರೆ ಚಿನ್ನ. ಜೊತೆಗೆ ಕನಿಷ್ಠ ರಿಸರ್ವ್ ಪದ್ಧತಿಯ ಅನುಸಾರ ಸೆಂಟ್ರಲ್ ಬ್ಯಾಂಕ್ ಆರ್‌ಬಿಐನಲ್ಲಿ 560 ಟನ್ ಚಿನ್ನವನ್ನು ಇಡಲಾಗಿದೆ.

2015ರಲ್ಲಿ ಸುಮಾರು ಒಂದು ಸಾವಿರ ಟನ್ ಚಿನ್ನವನ್ನು ಭಾರತ ಆಮದು ಮಾಡಿಕೊಂಡಿತ್ತು. ಇದು ಜಾಗತಿಕ ಪೂರೈಕೆಯ ಐದನೇ ಒಂದರಷ್ಟು. ಕಳೆದ ವರ್ಷ 2003ರ ನಂತರ ಅತ್ಯಂತ ಕಡಿಮೆ ಅಂದರೆ 492ಟನ್ ಚಿನ್ನ ಆಮದಾಗಿತ್ತು. ಆದರೆ ಈ ಫೆಬ್ರುವರಿ ಒಂದು ತಿಂಗಳಲ್ಲೇ 50 ಟನ್ ಚಿನ್ನ ಆಮದಾಗಿದೆ ಎಂದರೆ ಭಾರತದಲ್ಲಿ ಬಂಗಾರದ ಹಸಿವು ಎಷ್ಟಿದೆ ಎಂಬುದನ್ನು ಊಹಿಸಬಹುದು. ಈ ವಿಷಯದಲ್ಲಿ ಚೀನಾ ಬಿಟ್ಟರೆ ನಮ್ಮ ದೇಶ ಎರಡನೇ ಸ್ಥಾನದಲ್ಲಿದೆ.

ಹಿಂದೆ 80:20 ನಿಯಮವಿತ್ತು. ಅಂದರೆ ಆಮದಾದ ಚಿನ್ನದಲ್ಲಿ ಆಭರಣ ತಯಾರಿಸಿ ಶೇ. 20ರಷ್ಟನ್ನು ರಫ್ತು ಮಾಡಬೇಕೆಂಬ ನಿಯಮವಿತ್ತು. ಆದರೆ ಇದನ್ನು ಈಗ ರದ್ದುಪಡಿಸಲಾಗಿದೆ.

ಭಾರತ ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಚಿನ್ನವನ್ನು ಆಮದು ಮಾಡಿಕೊಳ್ಳುತ್ತದೆ ಎಂದರೆ ಇದು ಎಲ್ಲಿ ಸಿಗುತ್ತದೆ ಎಂಬ ಕುತೂಹಲ ಇದ್ದೇ ಇರುತ್ತದೆ. ಬೆರಳೆಣಿಕೆಯ ಪ್ರಮಾಣದ ದೇಶಗಳಲ್ಲಿ ಈ ಅಮೂಲ್ಯ ಲೋಹ ಲಭ್ಯ. ಚೀನಾ, ದಕ್ಷಿಣ ಆಫ್ರಿಕಾ, ಅಮೆರಿಕ, ಆಸ್ಟ್ರೇಲಿಯ, ಕೆನಡ, ಪೆರು, ಇಂಡೋನೇಷ್ಯಾ ಮೊದಲಾದ ದೇಶಗಳಲ್ಲಿ ಚಿನ್ನದ ಗಣಿಗಳಿದ್ದು, ಕಚ್ಚಾ ಚಿನ್ನವನ್ನು ತೆಗೆಯಲಾಗುತ್ತದೆ. ಇವುಗಳಿಗೆ 'ಡೋರ್ ಬಾರ್' ಎನ್ನಲಾಗುವುದು. ಈ ಗಟ್ಟಿಯಲ್ಲಿ ಶೇ. 80ರಷ್ಟು ಶುದ್ಧ ಚಿನ್ನವಿದ್ದು, ಅವುಗಳನ್ನು ಸಂಸ್ಕರಣ ಘಟಕಗಳಿಗೆ ಕಳಿಸಿ ಬೇರೆ ಬೇರೆ ಪ್ರಮಾಣದ ಶುದ್ಧತೆ ಇರುವ ಬಂಗಾರವನ್ನು ವಿವಿಧ ರೂಪದಲ್ಲಿ ತಯಾರಿಸಲಾಗುವುದು.

ದೊಡ್ಡ ಪ್ರಮಾಣದಲ್ಲಿ ತಯಾರಾಗುವ ಚಿನ್ನದ ಗಟ್ಟಿಗಳೆಂದರೆ ಲಂಡನ್ನಿನ ಗುಡ್ ಡೆಲಿವರಿ ಬಾರ್ಸ್. ಲಂಡನ್ ಬುಲಿಯನ್ ಮಾರುಕಟ್ಟೆ ಸಂಘದ

